# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 171 |
| ಉತ್ತರಿಸುವ ದಿನಾಂಕ | 16.02.2022 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಅನು ಕ್ರಮ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>2021-22ನೇ ಸಾಲಿನಲ್ಲಿ ನಗರ ಸಭೆ ವಸತಿ ಯೋಜನೆಗಳಾವುವು; ಪ್ರತ್ಯೇಕ ಯೋಜನೆಗಳಿಗೆ ಮೀಸಲಿಟ್ಟ ಅನುದಾನ ಎಷ್ಟು; ಭೌತಿಕ, ಆರ್ಥಿಕ ಅನುಷ್ಠಾನಗೊಳಿಸುವ ಮಾರ್ಗಸೂಚಿ ಯೋಜನೆ ವಾರು ಮಾಹಿತಿ ಒದಗಿಸುವುದು;</td><td>
2021-22ನೇ ಸಾಲಿನಲ್ಲಿ ಈ ಕೆಳಕಂಡ ನಗರ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:-
1. ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ)<br>
2. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)<br>
3. ದೇವರಾಜ್ ಅರಸು ವಸತಿ ಯೋಜನೆ (ನಗರ)<br>
4. ವಾಜಪೇಯಿ ವಸತಿ ಯೋಜನೆ (ನಗರ)<br>
5. ಮಾನ್ಯ ಮುಖ್ಯ ಮಂತ್ರಿಯವರ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ.
ವಿವಿಧ ವಸತಿ ಯೋಜನೆಗಳಿಗೆ ಆಯವ್ಯಯದಡಿ ಒದಗಿಸಲಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ:-
<table>
<tr><th>ಯೋಜನೆ</th><th>ಒದಗಿಸಲಾದ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><td>ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ*</td><td>500.00</td></tr>
<tr><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)</td><td>527.73</td></tr>
<tr><td>ದೇವರಾಜ್ ಅರಸು ವಸತಿ ಯೋಜನೆ*</td><td>50.00</td></tr>
<tr><td>ವಾಜಪೇಯಿ ವಸತಿ ಯೋಜನೆ (ನಗರ)</td><td>250.00</td></tr>
<tr><td>ಒಟ್ಟು :</td><td>1327.73</td></tr>
</table>
*ಈ ಯೋಜನೆಗಳಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕ ಅನುದಾನ ಬಿಡುಗಡೆಯಾಗುವುದಿಲ್ಲ.
2021-22ನೇ ಸಾಲಿನಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ) ಮತ್ತು ವಾಜಪೇಯಿ ನಗರ ವಸತಿ ಯೋಜನೆಯಡಿ ಸರ್ಕಾರದ ಆದೇಶ ಸಂಖ್ಯೆ: ವಇ 44 ಹೆಚ್‌ಎಹೆಚ್ 2021 (ಭಾಗ-2), ದಿನಾಂಕ: 31.12.2021 ರಲ್ಲಿ ನಗರ ಸ್ಥಳೀಯ ಸಂಸ್ಥೆವಾರು ಗುರಿ ಹಂಚಿಕೆ ಮಾಡಿ ಆದೇಶಿಸಲಾಗಿದೆ.
</td></tr>
</table>

<table>
<tr>
<td></td>
<td></td>
<td>
ಯೋಜನಾವಾರು ವಿವರಗಳು ಕೆಳಕಂಡಂತಿವೆ:-
<table>
<tr><th>ನಗರ ಸ್ಥಳೀಯ ಸಂಸ್ಥೆ ವಿವರ</th><th>ಗುರಿ</th><th>ಒಟ್ಟು ನಗರ ಸ್ಥಳೀಯ ಸಂಸ್ಥೆ ಗಳು</th><th>ಒಟ್ಟು ಗುರಿ</th><th>ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ)</th><th>ವಾಜಪೇಯಿ ನಗರ ವಸತಿ ಯೋಜನೆ</th></tr>
<tr><td>ಮಹಾನಗರ ಪಾಲಿಕೆ</td><td>300</td><td>10</td><td>3000</td><td>720</td><td>2280</td></tr>
<tr><td>ನಗರಸಭೆ</td><td>100</td><td>61</td><td>6100</td><td>1464</td><td>4636</td></tr>
<tr><td>ಪುರಸಭೆ</td><td>75</td><td>121</td><td>9075</td><td>2178</td><td>6897</td></tr>
<tr><td>ಪಟ್ಟಣ ಪಂಚಾಯಿತಿ</td><td>50</td><td>118</td><td>5900</td><td>1416</td><td>4484</td></tr>
<tr><td colspan="2">ಒಟ್ಟು:</td><td>310</td><td>24075</td><td>5778</td><td>18297</td></tr>
</table>
</td>
</tr>
<tr>
<td>ಆ</td>
<td>ನಗರ ಸಭೆ G+3 ವಸತಿ ಯೋಜನೆ ಬಿಡುಗಡೆಯಾಗಿರುವ ಭೌತಿಕ ಆರ್ಥಿಕ ಅನುದಾನ ಎಷ್ಟು ಹಾಗೂ ಅನುಷ್ಠಾನಗೊಳಿಸುವ ಮಾರ್ಗಸೂಚಿಯ ಈ ಯೋಜನೆ ಯಾವ ಹಂತದಲ್ಲಿದೆ;</td>
<td>
ಬೀದರ್ ನಗರಸಭೆಯಲ್ಲಿ G+3 ಮಾದರಿಯಲ್ಲಿ ಈ ಕೆಳಕಂಡ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ:-
<table>
<tr><th>ನಗರದ ಹೆಸರು</th><th>ಅನುಮೋದನೆಗೊಂಡ ಮನೆಗಳ ಸಂಖ್ಯೆ</th></tr>
<tr><td>ಬೀದರ್</td><td>128</td></tr>
<tr><td>ಬೀದರ್</td><td>2200</td></tr>
</table>
<br>
ಸದರಿ ಯೋಜನೆಗಳಿಗೆ ಪರಿಷ್ಕೃತ ಡಿ.ಪಿ.ಆರ್. ಸಿದ್ಧಪಡಿಸಲಾಗಿದ್ದು, ದಿನಾಂಕ: 17.12.2021 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ S.L.S.M.C. ಸಮಿತಿಯು ತನ್ನ 29ನೇ ಸಭೆಯಲ್ಲಿ ನೀಡಿದ ನಿರ್ದೇಶನದಂತೆ ಎಲ್ಲಾ ಫಲಾನುಭವಿಗಳ ಆಯ್ಕೆ ಹಾಗೂ ಪ್ರತಿ ಫಲಾನುಭವಿಯಿಂದ ರೂ. 10,000/- (ಹತ್ತು ಸಾವಿರ ರೂಪಾಯಿಗಳು) ಗಳ ಪ್ರಾರಂಭಿಕ ಠೇವಣಿ ಸಂಗ್ರಹಿಸಿದ ನಂತರ ಯೋಜನೆಯಡಿ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸಬೇಕಾಗುತ್ತದೆ.
<br><br>
ಇದರಿಂದಾಗಿ, ಪ್ರಸ್ತುತ ಸದರಿ ಯೋಜನೆಗಾಗಿ ಅನುದಾನವನ್ನು ಬಿಡುಗಡೆಗೊಳಿಸಿರುವುದಿಲ್ಲ.
</td>
</tr>
</table>

[ಸಂಖ್ಯೆ: ವಇ 24 ಹೆಚ್ಎಫ್ಎ 2021]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು.